# ಪ್ರತಿಪಕ್ಷಗಳ 8 ಸದಸ್ಯರು ಸಸ್ಪೆಂಡ

## ರಾಜ್ಯಸಭೆ ಸಭಾಧ್ಯಕ್ಷ ವೆಂಕಯ್ಯ ನಾಯ್ಡು ಆದೇಶ । ಆಕ್ಷೇಪಾರ್ಹ ವರ್ತನೆ ಹಿನ್ನೆಲೆ ಕ್ರ...

ನವದೆಹಲಿ: ರಾಜ್ಯಸಭೆಯಲ್ಲಿ ಭಾನುವಾರ ಕೃಷಿ ವಿಧೇಯಕಗಳ ಅಂಗೀಕಾರದ ವೇಳೆ ಆಕ್ಷೇಪಾರ್ಹ ವರ್ತನೆ ತೋರಿದ ಟಿಎಂಸಿ ನಾಯಕ ಡೆರೆಕ್ ಒಬ್ರಿಯಾನ್, ಆಮ್ ಆದ್ಮಿ ಪಕ್ಷದ ಸಂಜಯ್ ಸಿಂಗ್ ಸೇರಿದಂತೆ 8 ಮಂದಿ ಸಂಸದರನ್ನು ಅಮಾನತು ಮಾಡಿ ಸೋಮವಾರ ರಾಜ್ಯಸಭೆ ಸಭಾಧ್ಯಕ್ಷ ಎಂ. ವೆಂಕಯ್ಯ ನಾಯ್ಡು ಆದೇಶ ಹೊರಡಿಸಿದ್ದಾರೆ.

ಈ ಆದೇಶ ಹೊರಬೀಳುತ್ತಿದ್ದಂತೆ ಕೆಂಡಾಮಂಡಲವಾದ ಪ್ರತಿಪಕ್ಷಗಳು, ಸದನದಲ್ಲಿ ಮತ್ತೆ ಗದ್ದಲವೆಬ್ಬಿಸಿದ್ದು ಸೋಮವಾರದ ಕಲಾಪವು ಬಹುತೇಕ ಕೊಚ್ಚಿಹೋಯಿತು. ಪ್ರತಿಪಕ್ಷಗಳ ನಾಯಕರ ಕೋಲಾಹಲ ಮುಂದುವರಿದ ಹಿನ್ನೆಲೆಯಲ್ಲಿ ದಿನದ ಮಟ್ಟಿಗೆ ಕಲಾಪವನ್ನು ಮುಂದೂಡಲಾಯಿತು.

ವಿಧೇಯಕಗಳ ಅಂಗೀಕಾರದ ವೇಳೆ ಸದಸ್ಯರ ವರ್ತನೆಯ ಬಗ್ಗೆ ಪ್ರಸ್ತಾಪಿಸಿದ ರಾಜ್ಯಸಭೆ ಸಭಾಧ್ಯಕ್ಷ ವೆಂಕಯ್ಯ ನಾಯ್ಡು 'ಇದೊಂದು ದುರದೃಷ್ಟಕರ ಹಾಗೂ ಖಂಡನೀಯ ಬೆಳವಣಿಗೆ. ಇದು ಸಂಸತ್‌ನ ಅದರಲ್ಲೂ ವಿಶೇಷವಾಗಿ ಹಿರಿಯರ ಮನೆಯ ಘನತೆಗೆ ಧಕ್ಕೆ ಉಂಟುಮಾಡಿದೆ' ಎಂದು ಹೇಳಿದರು. ಅಲ್ಲದೆ, ಉಪಸಭಾಧ್ಯಕ್ಷ ಹರಿವಂಶ್ ವಿರುದ್ಧ ಪ್ರತಿಪಕ್ಷಗಳು ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿಯನ್ನೂ ತಿರಸ್ಕರಿಸಿದರು.

ಅಮಾನತುಗೊಂಡ ಎಲ್ಲ 8 ಸಂಸದರೂ ಕೂಡಲೇ ಸದನದಿಂದ ಹೊರನಡೆಯುವಂತೆ ಹಲವು ಬಾರಿ ಸೂಚಿಸಲಾಯಿತಾದರೂ, ಅಮಾನತಾದ ಡೆರೆಕ್ ಒಬ್ರಿಯಾನ್(ಟಿಎಂಸಿ), ಸಂಜಯ್ ಸಿಂಗ್(ಆಪ್), ನಜೀರ್ ಹುಸೇನ್(ಕಾಂಗ್ರೆಸ್), ರಿಪುನ್ ಬೋರೇನ್(ಕಾಂಗ್ರೆಸ್), ಡೋಲಾ ಸೇನ್ (ಟಿಎಂಸಿ) ಮತ್ತು ಎಲಮಾರಮ್ ಕರೀಂ(ಸಿಪಿಎಂ) ತಮ್ಮ ಆಸನಗಳಿಂದ ಕದಲಲಿಲ್ಲ. ಕೊನೆಗೆ ಅನಿವಾರ್ಯವಾಗಿ ಸದನವನ್ನು ಮುಂದೂಡಬೇಕಾಯಿತು. ಸೋಮವಾರ ಒಟ್ಟಾರೆ 4 ಬಾರಿ ಸದನವು ಮುಂದೂಡಿಕೆಗೆ ಸಾಕ್ಷಿಯಾಯಿತು.

**ಪ್ರತಿಪಕ್ಷಗಳ ನಾಯಕರಿಂದ ಪ್ರತಿಭಟನೆ:** ಸಂಸದರ ಅಮಾನತು ಖಂಡಿಸಿ ... ಭವನದ ಆವರಣದಲ್ಲಿ ಕಾಂಗ್ರೆಸ್, ಸಿಪಿಎಂ, ಶಿವಸೇನೆ, ಜೆಡಿಎಸ್, ಟಿಎಂಸಿ, ಸಿಪಿಐ, ಎಸ್ಪಿ ಸಂಸದರು ಪ್ರತಿಭಟನೆ ನಡೆಸಿದರು. 'ಪ್ರಜಾಸತ್ತೆಯ ಹತ್ಯೆ', 'ಸಂಸತ್‌ನ ಸಾವು', 'ಶೇಮ್ ಶೇಮ್' ಎಂದು ಬರೆಯಲಾದ ಫಲಕಗಳನ್ನು ಹಿಡಿದು ಘೋಷಣೆ ಕೂಗಿದ್ದಾರೆ. ಅಮಾನತು ಶಿಕ್ಷೆಗೆ ನಾವು ಬಗ್ಗುವುದಿಲ್ಲ. ನಾವು ಈ ಹೋರಾಟದಲ್ಲಿ ರೈತರ ಬೆನ್ನಿಗೆ ನಿಲ್ಲುತ್ತೇವೆ. ಉಪಸಭಾಧ್ಯಕ್ಷರು ಭಾನುವಾರ ಸಂಸದೀಯ ಪ್ರಕ್ರಿಯೆಯನ್ನೇ ಗಾಳಿಗೆ ತೂರಿದ್ದಾರೆ. ಇದು ಬಿಜೆಪಿಯ ಹೇಡಿತನವನ್ನು ತೋರಿಸಿದೆ ಎಂದೂ ಆರೋಪಿಸಿದ್ದಾರೆ.

**ಅನಿರ್ದಿಷ್ಟಾವಧಿ ಧರಣಿ:** ಇದೇ ವೇಳೆ, ತಮ್ಮನ್ನು ಅಮಾನತುಗೊಳಿಸಿದ್ದನ್ನು ಪ್ರಶ್ನಿಸಿ ಹಾಗೂ ರೈತರಿಗೆ ಬೆಂಬಲ ಘೋಷಿಸಿ ಅಮಾನತಾದ ಸಂಸದರು ಸಂಸತ್‌ಭವನದ ಆವರಣದಲ್ಲಿ ಧರಣಿ ಆರಂಭಿಸಿದ್ದಾರೆ. ಸೋಮವಾರವೇ ಹಲ್ಲುಹಾಸಿನ ಮೇಲೆ ಕುಳಿತು ಧರಣಿ ಆರಂಭಿಸಿರುವ ಸಂಸದರು, ಅನಿರ್ದಿಷ್ಟಾವಧಿ ಧರಣಿ ನಡೆಸುವುದಾಗಿ ಹೇಳಿದ್ದಾರೆ. ... ವಿಧೇಯಕಗಳಿಂದಾಗಿ ... ಮತ್ತು ಅಂತಿಮವಾಗಿ ಭಾರತೀಯ ಆಹಾರ ನಿಗಮವು ನಮ್ಮ ಉತ್ಪನ್ನಗಳನ್ನು ಖರೀದಿಸುತ್ತದೋ, ಇಲ್ಲವೋ ಎಂಬ ಅನುಮಾನ ಅವರಲ್ಲಿ ಉಂಟಾಗಿದೆ. ಹೀಗಾಗಿ, ಕನಿಷ್ಠ ಬೆಂಬಲ ಬೆಲೆಯಲ್ಲಿ ಭತ್ತ ಮತ್ತು ಗೋದಿಯನ್ನು ಸ್ವೀಕರಿಸುವುದನ್ನು ಮುಂದುವರಿಸುತ್ತೇವೆ ಎಂಬ ಭರವಸೆಯನ್ನು ಸರ್ಕಾರ ಕೂಡಲೇ ನೀಡಬೇಕಿದೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಮನೀಶ್ ತಿವಾರಿ ಆಗ್ರಹಿಸಿದ್ದಾರೆ.

### ಎಫ್‌ಸಿಆರ್‌ಎಗೆ ಲೋಕಸಭೆ ಒಪ್ಪಿಗೆ

... (ಎಫ್‌ಸಿಆರ್‌ಎ) ಲೋಕಸಭೆ ಒಪ್ಪಿಗೆ ನೀಡಿದೆ. ಭಾನುವಾರವಷ್ಟೇ ಲೋಕಸಭಾ ಕಲಾಪದಲ್ಲಿ ಕೇಂದ್ರ ಸರ್ಕಾರ ವಿಧೇಯಕವನ್ನು ಮಂಡಿಸಿತ್ತು. ಸೋಮವಾರ ನಡೆದ ಚರ್ಚೆಯ ವೇಳೆ ವಿಪಕ್ಷಗಳು ವಿಧೇಯಕದ ಕೆಲವು ಅಂಶಗಳ ಬಗ್ಗೆ ಆತಂಕ ವ್ಯಕ್ತಪಡಿಸಿದವು. ಕೇಂದ್ರ ಗೃಹ ಸಚಿವ ನಿತ್ಯಾನಂದ ರಾಯ್, ವಿಧೇಯಕವು ಯಾವುದೇ ಸರ್ಕಾರೇತರ ಸಂಸ್ಥೆಯ ವಿರುದ್ಧವಾಗಿಲ್ಲ ಎಂಬ ಆಶ್ವಾಸನೆ ನೀಡಿದ ನಂತರ ಸದಸ್ಯರು ವಿಧೇಯಕಕ್ಕೆ ಒಪ್ಪಿಗೆ ನೀಡಿದರು.




ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಸೇರಿದಂತೆ ಪ್ರತಿಪಕ್ಷ ನಾಯಕರ ಪ್ರತಿಭಟನೆ.

### ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಕಾಂಗ್ರೆಸ್ ನಿರ್ಧಾರ

ಕೃಷಿ ವಿಧೇಯಕಗಳನ್ನು ವಿರೋಧಿಸಿ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸುವುದಾಗಿ ಕಾಂಗ್ರೆಸ್ ಸೋಮವಾರ ಘೋಷಿಸಿದೆ. ಅಲ್ಲದೆ, ವಿಧೇಯಕದ ವಿರುದ್ಧ 2 ಕೋಟಿ ರೈತರು, ಬಡವರ ಸಹಿ ಸಂಗ್ರಹ ಅಭಿಯಾನ, ರಾಜ್ಯಪಾಲರಿಗೆ ಮನವಿ ಸಲ್ಲಿಕೆ, ಅ. 2 ಗಾಂಧಿಜಯಂತಿಯನ್ನು 'ರೈತರನ್ನು, ಕೃಷಿ ಕಾರ್ಮಿಕರನ್ನು ಉಳಿಸಿ' ದಿನವನ್ನಾಗಿ ಆಚರಿಸುವುದಾಗಿ ತಿಳಿಸಿದೆ. ಇದೇ ವೇಳೆ, ಪಂಜಾಬ್, ಹರ್ಯಾಣ ಸೇರಿದಂತೆ ಹಲವು ರಾಜ್ಯಗಳಲ್ಲಿ ಸೋಮವಾರವೂ ರೈತರ ಪ್ರತಿಭಟನೆಗಳು ನಡೆದಿವೆ. ಪಂಜಾಬ್‌ನಲ್ಲಿ ವಿಧೇಯಕ ಖಂಡಿಸಿ ಸೆ.25ರಂದು ರಾಜ್ಯವ್ಯಾಪಿ ಬಂದ್‌ಗೆ ರೈತ ಸಂಘಟನೆಗಳು ಕರೆ ನೀಡಿವೆ. ವಿಧೇಯಕ ವಾಪಸ್‌ಗೆ ಆಗ್ರಹಿಸಿ 28ರಂದು ತಮಿಳುನಾಡಿನಲ್ಲಿ ಪ್ರತಿಭಟನೆ ನಡೆಸಲು ಡಿಎಂಕೆ ನಿರ್ಧರಿಸಿದೆ.

### ಸಹಿ ಹಾಕದಂತೆ ರಾಷ್ಟ್ರಪತಿಗೆ ಪತ್ರ

ಪ್ರಸ್ತಾವಿತ ವಿಧೇಯಕಗಳಿಗೆ ಸಹಿ ಹಾಕದಂತೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೆ ಪ್ರತಿಪಕ್ಷಗಳು ಮ... ಮಾಡಿವೆ. ಈ ವಿಚಾರದಲ್ಲಿ ಕೂಡಲೇ ಮಧ್ಯಪ್ರವೇಶಿಸಬೇಕು ಎಂದೂ ಕಾಂಗ್ರೆ... ಎನ್‌ಸಿಪಿ, ಎಡಪಕ್ಷಗಳು, ಡಿಎಂಕೆ, ಎಸ್ಪಿ, ಟಿಎಂಸಿ, ಆರ್‌ಜೆಡಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ರಾಷ್ಟ್ರಪತಿಗೆ ಬರೆದ ಪತ್ರದಲ್ಲಿ ಕೋರಿಕೊಂಡಿವೆ. ಇದೇ ವೇಳೆ, ಶಿರೋಮಣಿ ಅಕಾಲಿ ದಳವು ಸೋಮವಾರ ಪ್ರತ್ಯೇಕವಾಗಿ ರಾಷ್ಟ್ರಪತಿಯವರನ್ನು ಭೇಟಿ ಮಾಡಿ ವಿಧೇಯಕಕ್ಕೆ ಸಹಿ ಹಾಕದಂತೆ ಮನವಿ ಮಾಡಿದೆ.

### 'ಕೊರೊನಾ ಹಬ್ಬಲು ತಬ್ಲೀಘಿ ಕಾರಣ'

ದೆಹಲಿಯ ನಿಜಾಮುದ್ದೀನ್‌ನಲ್ಲಿ ನಡೆದ ತಬ್ಲೀಘಿ ಸಮಾವೇಶದಿಂದಾಗಿ ಹಲವರಿಗೆ ಕೊರೊನಾ ಸೋಂಕು ತಗುಲಿತು ಎಂದು ರಾಜ್ಯಸಭೆಗೆ ಕೇಂದ್ರ ಸಚಿವ ಕಿಶನ್ ರೆಡ್ಡಿ ಮಾಹಿತಿ ನೀಡಿದ್ದಾರೆ. ಮಾ.29ರಿಂದ ದೆಹಲಿ ಪೊಲೀಸರು 233 ತಬ್ಲೀಘಿ ಜಮಾತ್ ಸದಸ್ಯರನ್ನು ಬಂಧಿಸಿದ್ದಾರೆ. ಮಾಸ್ಕ್, ಸ್ಯಾನಿಟೈಸರ್, ಶಾರೀರಿಕ ಅಂತರದ ನಿಯಮಗಳೇ ಇಲ್ಲದೆ ಸಮಾವೇಶ ನಡೆಸಿದ ಪರಿಣಾಮ ಸೋಂಕು ಅನೇಕರಿಗೆ ಹರಡಿತು ಎಂದಿದ್ದಾರೆ.

### ನಕ್ಸಲ್ ಸಮಸ್ಯೆ 46 ಜಿಲ್ಲೆಗಳಿಗೆ ಸೀಮಿತ

ದೇಶಾದ್ಯಂತ ನಕ್ಸಲ್ ಸಮಸ್ಯೆಯು ಗಣನೀಯವಾಗಿ ಇಳಿಮುಖವಾಗಿದ್ದು, ಈ ಸಮಸ್ಯೆ ಕೇವಲ 46 ಜಿಲ್ಲೆಗಳಿಗೆ ಸೀಮಿತವಾಗಿವೆ ಎಂದು ರಾಜ್ಯಸಭೆಗೆ ಕೇ... ಗೃಹ ಇಲಾಖೆ ಸೋಮವಾರ ಮಾಹಿತಿ ನೀಡಿದೆ. ದೇಶದ 11 ರಾಜ್ಯಗಳ ... ಜಿಲ್ಲೆಗಳು ನಕ್ಸಲ್ ಪೀಡಿತವಾಗಿದ್ದವು. 2019ರಲ್ಲಿ 61 ಜಿಲ್ಲೆಗಳಲ್ಲಿ ನ... ಹಿಂಸಾಚಾರ ನಡೆದಿದ್ದರೆ, ಪ್ರಸಕ್ತ ವರ್ಷ 46 ಜಿಲ್ಲೆಗಳಲ್ಲಿ ಮಾತ್ರವೇ ಹಿಂಸಾಚ... ವರದಿಯಾಗಿದೆ ಎಂದು ಸಚಿವ ಕಿಶನ್ ರೆಡ್ಡಿ ತಿಳಿಸಿದ್ದಾರೆ.

**ರೈತರ ಆತ್ಮಹತ್ಯೆಯ ವಿವರ ನೀಡುತ್ತಿಲ್ಲ:** ಹ... ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ... ರೈತರ ಆತ್ಮಹತ್ಯೆ ಕುರಿತ ವಿವರಗಳನ್ನು ... ಹೀಗಾಗಿ ಕೃಷಿ ಕ್ಷೇತ್ರದಲ್ಲಿನ ಆತ್ಮಹತ್ಯೆಗಳ ... ದತ್ತಾಂಶ ಪ್ರಕಟಿಸಲು ಸಾಧ್ಯವಾಗಿಲ್ಲ ಎಂದು ಸಚಿವ ಕಿ... ರೆಡ್ಡಿ ಹೇಳಿದ್ದಾರೆ. ಈ ನಡುವೆ, ಕಳೆದ 4 ವರ್ಷ... 2,120 ಪಾಕಿಸ್ತಾನೀಯರು, ಅಫ್ಘನ್‌ನ 188 ಮ... 99 ಬಾಂಗ್ಲಾದೇಶೀಯರಿಗೆ ಭಾರತೀಯ ಪೌ... ನೀಡಲಾಗಿದೆ ಎಂದು ಸಚಿವ ನಿತ್ಯಾನಂದ ರಾ... ಮಾಹಿತಿ ನೀಡಿದ್ದಾರೆ.

> ಕೃಷಿ ವಿಧೇಯಕವನ್ನು ವಿರೋಧಿಸುತ್ತಿರುವವರು ಪಟ್ಟಭದ್ರ ಹಿತಾಸಕ್ತಿಗಳೇ ವಿನಾ ರೈತರಲ್ಲ. ಇದೊಂದು ಕ್ರಾಂತಿಕಾರಿ ವಿಧೇಯಕ. ಇನ್ನು ಮುಂದೆ ರೈತರು ಯಾವುದೇ ಸೆಸ್ ಅಥವಾ ತೆರಿಗೆ ಪಾವತಿಸದೇ ಉತ್ಪನ್ನಗಳನ್ನು ಮಾರಾಟ ಮಾಡಬಹುದು.
> •ದೇವೇಂದ್ರ ಫಡ್ನವೀಸ್, ಮಹಾರಾಷ್ಟ್ರ ಮಾಜಿ ಸಿಎಂ

> ಕೃಷಿ ವಿಧೇಯಕಗಳ ಅಂಗೀಕಾರದ ವೇಳೆ ಉಪಸಭಾಧ್ಯಕ್ಷ ಹರಿವಂಶ್ ಅವರನ್ನು ಪ್ರತಿಪಕ್ಷಗಳ ನಾಯಕರು ನಡೆಸಿಕೊಂಡ ರೀತಿ ಖಂಡನೀಯ. ಇದು ಬಿಹಾರದ ಘನತೆಯ ಮೇಲಾದ ಗಾಯ. ರಾಜ್ಯದ ಜನರು ಇದಕ್ಕೆ ತಕ್ಕ ಪ್ರತ್ಯುತ್ತರ ನೀಡಲಿದ್ದಾರೆ.
> •ನಿತೀಶ್ ಕುಮಾರ್, ಬಿಹಾರ ಸಿಎಂ

> ರೈತರ ಹಿತಾಸಕ್ತಿ ಕಾಪಾಡಲೆಂದು ಹೋರಾಡಿದ 8 ಸಂಸದರನ್ನು ಅಮಾನತು ಮಾಡಿರುವುದು ದುರದೃಷ್ಟಕರ. ಪ್ರಜಾಸತ್ತೆಗೆ ಗೌರವ ಕೊಡದ ಕೇಂದ್ರ ಸರ್ಕಾರದ ನಿರಂಕುಶ ನೀತಿಯನ್ನು ಇದು ಪ್ರತಿಬಿಂಬಿಸಿ...
> •ಮಮತಾ ಬ್ಯಾನರ್ಜಿ, ಟಿಎಂಸಿ ನಾಯ...